ಶ್ರೀ ಎಸ್. ಆರ್. ಬೊಮ್ಮಾಯಿ.— ಇದು ಅಂತರ ರಾಜ್ಯ ಯೋಜನೆಯಾಗಿದೆ, ಈ ಯೋಜನೆಯಿಂದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಎರಡನ್ನೂ ಉತ್ಪತ್ತಿ ಮಾಡತಕ್ಕ ವಿಚಾರ ಇದರಲ್ಲಿ ಇದೆ. ಇದರ ಬಗ್ಗೆ ಮಹಾರಾಷ್ಟ್ರ ಸರ್ಕಾರದೊಡನೆ ನಾವು ಪತ್ರ ವ್ಯವಹಾರ ಮಾಡಿದ್ದೇವೆ. ಮತ್ತು ಅಂಶಿಮವಾದ ಸಲಹೆಯನ್ನು ಮಹಾರಾಷ್ಟ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದರಿಂದ ಇನ್ನೂ ಉತ್ತರ ಬರಬೇಕಾಗಿದೆ. ಉತ್ತರ ಬಂದ ಮೇಲೆ ಅಗ್ರಿಮೆಂಟ್ ಮಾಡಿಕೊಂಡು ಹಣವನ್ನು ಬಿಡುಗಡೆ ಮಾಡುತ್ತೇವೆ. ರೈತರ ಹಿತದೃಷ್ಟಿಯಿಂದ ಈಗಾಗಲೇ ಎರಡು ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಅಗ್ರಿಮೆಂಟ್ ಆದ ಮೇಲೆ ಎಷ್ಟು ಹಣ ಬಿಡುಗಡೆ ಮಾಡಬೇಕಾಗಿ ಬರುತ್ತದೆಯೋ ಅಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್.— ಕರ್ನಾಟಕ ರಾಜ್ಯದಲ್ಲಿ ಬರತಕ್ಕ ಕೆನಾಲ್‌ಗಳನ್ನು ಬೇಗ ಮಾಡದೇ ಹೋದರೆ ನೀರನ್ನು ಪೂರೈಕೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಕೆನಾಲ್‌ಗಳನ್ನು ಮಾಡುವುದಕ್ಕೆ ಏನು ಕಾರ್ಯಕ್ರಮ ಹಾಕ ಕೊಳ್ಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಆದರ ಬಗ್ಗೆ ಕೆಲಸ ಮಾಡಿದ್ದೇವೆ.

Alignments to subways and cross-sections are completed for the embankment 34.34 Kms.

excavation along with canal, fixing of stones, are completed.

Alignment survey and cross-section surveys are completed for the embankment 37.34 kms, out of total length of 59 kms and works in the remaining Kms are in progress.

ಬಿಜಾಪುರ ಜಿಲ್ಲೆಯ ಮುಳವಾಡದಲ್ಲಿ ಏತ ನೀರಾವರಿ ಯೋಜನೆ

೨೩೩೮. ಶ್ರೀ ಎಂ. ಎಲ್. ಉಸ್ತಾದ್,(ಬಿಜಾಪುರ).—ಮಾನ್ಯ ಸಣ್ಣ ಹಾಗೂ ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯ ಏತ ನೀರಾವರಿ ಯೋಜನೆಗೆ ಮುಖ್ಯ ಮಂತ್ರಿಗಳು ಶಂಖು ಸ್ಥಾಪನೆ ಮಾಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಈ ಯೋಜನೆಗೆ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆಯೇ ?

ಇ) ಈ ಯೋಜನೆಗೆ ನಿಗದಿತವಾದ ಹಣ ?

ಈ) ಇಲ್ಲಿಯವರೆಗೆ ಸಾಧಿಸಿದ ಪ್ರಗತಿ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು).—

ಅ) ಹೌದು

ಆ) ಮುಳವಾಡ ಏತ ನೀರಾವರಿ ಯೋಜನೆಯು ಹೆಡ್‌ವರ್ಕ್ಸ್‌ಗಳನ್ನೊಳಗೊಂಡ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ೧೦೭೧.೧೦ ಕೋಟಿ ರೂ.ಗಳ ಪರಿಷ್ಕೃತ ಅಂದಾಜಿಗೆ, ಮುಖ್ಯ ಇಂಜಿನಿಯರ್, ಕೃಷ್ಣಾ ಮೇಲ್ದಂಡೆ ಯೋಜನೆ ಆಲಮಟ್ಟಿ, ಇವರು ಜನವರಿ ೧೯೮೮ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿದ್ದಾರೆ.

ಇ) ಮುಳವಾಡ ಏತ ನೀರಾವರಿ ಯೋಜನಾ ವರದಿಯು ತಯಾರಾದ ನಂತರ ನಿಗದಿ ಪಡಿಸ ಬೇಕಾದ ಹಣವನ್ನು ನಿರ್ಧರಿಸಲಾಗುವುದು.

ಈ) ಹೆಡ್‌ವರ್ಕ್ಸ್‌ಗಳ ನಿರ್ಮಾಣ ಸ್ಥಳವು ನಿಷ್ಕರ್ಶಿತವಾಗಿದ್ದು ಹೆಚ್ಚಿನ ಸಮೀಕ್ಷಾ ಕಾರ್ಯವು ಪ್ರಗತಿಯಲ್ಲಿದೆ.

2-30 P.M.

ಶ್ರೀ ಎಂ ಎಲ್. ಉಸ್ತಾದ್.— ಮಾನ್ಯ ಅಧ್ಯಕ್ಷರೇ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಬಿಜಾಪುರ ಜಿಲ್ಲೆಯವರಾದ ನಾವು ಅದರಲ್ಲೂ ಬಿಜಾಪುರದ ನಾರ್ಥ್ ಸೈಡ್‌ನಲ್ಲಿರುವ ೫ ತಾಲ್ಲೂಕಿನವರು ಮುಳವಾಡ ಏತ ನೀರಾವರಿ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಕೇಳುತ್ತಲೇ ಬಂದಿದ್ದೇವೆ. ಹೋದಸಾರಿ ಜಿಲ್ಲಾಪರಿಷತ್ತಿನ ಎಲೆಕ್ಷನ್ ಆಗುವುದಕ್ಕಿಂತ ಮುಂಚೆ ನಮ್ಮ ಮಾನ್ಯ ಮುಖ್ಯಮಂತ್ರಿಯವರು ನಮ್ಮ ಜಿಲ್ಲೆಗೆ ದಿನಾಂಕ ೮-೧೨-೧೯೮೬ರಂದು ಮುಳವಾಡ ಏತ ನೀರಾವರಿ ಮಾಡುವ ಸಲುವಾಗಿ ಒಂದು ದೊಡ್ಡ ಕಲ್ಲನ್ನು ಹಾಕಿ ಬಂದರು. ಆ ಕಲ್ಲು ಎಲ್ಲಿಡೆ ಹೋಯಿತೋ ಗೊತ್ತಾಗಲಿಲ್ಲ ಉದ್ಘಾಟನೆಯ ಕಲ್ಲೂ ಇವತ್ತು ನಮಗೆ ಗುರುತು ಸಿಗುತ್ತಿಲ್ಲ. ಮಾನ್ಯ ಮಂತ್ರಿಗಳ ಉತ್ತರ ನೋಡಿದರೆ ಇವತ್ತಿನವರೆಗೂ ಒಂದು ಪೈಸೆಯನ್ನೂ ಕೆಳುಹಿಸಿಲ್ಲ. ಆಥವಾ ಬಜೆಟ್‌ನಲ್ಲೂ ನಿರ್ದಿಷ್ಟವಾದ ಹಣವನ್ನು ಬಿಡುಗಡೆ ಮಾಡಿಲ್ಲ. ಈ ಬಗ್ಗೆ ನಾನು ನಿರ್ದಿಷ್ಟವಾಗಿ ಕೇಳುವುದೇನೆಂದರೆ ಮುಳವಾಡ ಲಿಫ್ಟ್ ಇರಿಗೇಷನ್ ಬಿಜಾಪುರದಲ್ಲಿ ಆಗುವುದಕ್ಕೆ ಯಾವಾಗ ಪ್ರಯತ್ನ ಮಾಡುತ್ತೀರಿ ? ಎರಡನೆಯದಾಗಿ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಸಲುವಾಗಿ ವಿಶ್ವಬ್ಯಾಂಕಿನಿಂದ ನೆರವು ಪಡೆಯುತ್ತಿದ್ದಾರೆ. Whether this Mulwad Lift Irrigation scheme has been included in the Upper Krishna Project and if so whether it has been sent to the World Bank ? ಮೊದಲಿನಿಂದಲೂ ಇವರು ಸುಳ್ಳು ಹೇಳಿಕೊಂಡು ಬಂದಿದ್ದಾರೆ ವೋಟ್ ಗ್ರಾಬ್ ಮಾಡುವುದಕ್ಕೆಂದು ಬಂದು ವೋಟ್ ತಗೊಂಡು ಹೋದರು ಅಷ್ಟೇ. ಈಗಲಾದರೂ ಯಾವಾಗ ಇದನ್ನು ಮಾಡುತ್ತೇವೆಂದು ನಿಖರವಾಗಿ ಹೇಳಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಇಲ್ಲಿ ಸುಳ್ಳು ಹೇಳುವ ಪ್ರಶ್ನೆ ಇಲ್ಲ. ನಿಜವಾದ ಚಿತ್ರ ಈ ಮನೆಗೆ, ಜನಕ್ಕೆ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳೂ ಇದರ ಬಗ್ಗೆ ಹೇಳಿದ್ದಾರೆ. ಫೌಂಡೇಷನ್ ಹಾಕಿದ್ದಾದು ನಿಜ. ಇದಾದ ಮೇಲೆ ಈ ಕೆಲಸಕ್ಕೆ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ನಾಗಿದೆ, ಕೆಲಸ ಪ್ರಾರಂಭವಾಗುವುದಕ್ಕೆ ಹಣಕಾಸನ್ನು ಒದಗಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರು ಕೇಳಿದ್ದೇನೆಂದರೆ ಅಪ್ಪರ್ ಕೃಷ್ಣಾ ಪ್ರೊಜೆಕ್ಟ್ ಸಲುವಾಗಿ ವರ್ಲ್ಡ್‌ಬ್ಯಾಂಕ್‌ನಿಂದ ಪಡೆಯುವ ನೆರವಿನ ಯೋಜನೆಯಲ್ಲಿ ಇದನ್ನು ಸೇರಿಸಿದ್ದೀರೋ ಇಲ್ಲವೋ ಎಂದು ಮತ್ತು ಹಾಗಿಲ್ಲದಿದ್ದರೆ ಬೇರೆ ಯಾವರೀತಿ ಇದಕ್ಕೆ ಎಷ್ಟು ಹಣ ಇಟ್ಟಿದ್ದೀರಿ ಹೇಳಿ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಇದು ಇನ್‌ಕ್ಲೂಡ್ ಆಗಿಲ್ಲ, ನಾವು ಈಗಾಗಲೇ ಇದಕ್ಕೆ ಅಡ್ಮಿನಿಸ್ಟ್ರೇಟಿನ್ ಮತ್ತು ಟೆಕ್ನಿಕಲ್ ಅಪ್ರೂವ್ ಕೊಟ್ಟಿದ್ದೇವೆ, ನಾವೇ ಇದನ್ನು ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹಾಗಾದರೆ ಎಷ್ಟು ಹಣ ಇಟ್ಟಿದ್ದೀರೆಂದು ಹೇಳಿ. ಮಾನ್ಯ ಮಂತ್ರಿಗಳಿಗೆ ಹಿಂದೆ ಮೂರ್ನಾಲ್ಕು ಲಿಫ್ಟ್ ಇರಿಗೇಷನ್ ಮಾಡಬೇಕಾಗಿತ್ತು, ಆಗ ಅವರು ಅದರ ಜೊತೆಗೆ ಇದನ್ನೂ ಸೇರಿಸಿಬಿಟ್ಟರು, ಅವರದೆಲ್ಲ ಮಾಡಿಕೊಳ್ಳುತ್ತಾ ಹೋಗಿ, ಇದಕ್ಕೆ ಮಡ್ಡಿ ಕಾಸು ಏನೂ ಇಲ್ಲದ ಹಾಗಾಯಿತು. ಆದ್ದರಿಂದ ಇದಕ್ಕೆ ಹಣವನ್ನು ಎಷ್ಟು ರಿಲೀಸ್ ಮಾಡುತ್ತೀರೆಂದು ಸ್ಪಷ್ಟವಾಗಿ ಹೇಳಿ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಇದಕ್ಕೆ ಬೇರೆ ಹಣಕಾಸಿನ ಸಂಸ್ಥೆಗಳಿಂದ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಸರ್ಕಾರ ತನ್ನ ಪಾಲಿನ ೧೦ ಪರ್ಸೆಂಟ್ ಹಣವನ್ನು ಕೊಡುವ ವಿಚಾರ ಇದೆ. It is under consideration. We are negotiating with the financial agencies.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೀವು ಸೀಡ್‌ಮನಿ ಎಂದು ಕೊಟ್ಟಮೇಲೆ ಅಲ್ಲವೇ ಬೇರೆ ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನ್ಸ್ ಎಷ್ಟು ಕೊಡುತ್ತೇವೆಂದು ತೀರ್ಮಾನವಾಗುವುದು. ಆದ್ದರಿಂದ ಬೇಸಿಕ್ಕಾಗಿ ಎಷ್ಟು ಕ್ಯಾಪಿಟಲ್ ಇಟ್ಟಿದ್ದೀರಿ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ನಾವು ಪ್ರತ್ಯೇಕವಾಗಿ ಇದಕ್ಕಾಗಿ ಹಣ ಇಟ್ಟಿಲ್ಲ. ಬೇರೆ ಯಾವ್ಯಾವ ಸಂಸ್ಥೆಗಳು ಹಣ ಕೊಡಲು ಸಿದ್ಧವಾಗಿವೆ ಎಂದು ತೀರ್ಮಾನವಾದ ಮೇಲೆ ನಮ್ಮ ಪಾಲನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಎಂ.ಎಲ್. ಉಸ್ತಾದ್.—ಮುಳವಾಡ ಲಿಫ್ಟ್ ಇರಿಗೇಷನ್ ಏನು ಇದೆ ಇದು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗೆ ಬರುವುದಿಲ್ಲ ಮಾನ್ಯ ಸಚಿವರಿಗೆ ಇದು ಗೊತ್ತಿಲ್ಲ. ಅಲ್ಲಿ ಒಂದು ಫೌಂಡೇಷನ್ ಕಲ್ಲನ್ನು ಇಟ್ಟು ಹೋದರು ಅದು ಎಲ್ಲಿ ಹೋಯಿತೋ ಗೊತ್ತಿಲ್ಲ. ನೀವು ಕೂಡ ನಮ್ಮ ಕಡೆಯವರಿದ್ದೀರಿ. ವಿಶ್ವಬ್ಯಾಂಕಿನಿಂದ ಹಣ ಕೊಟ್ಟಿಲ್ಲ. ತಾವು ೧೦-೨೦ ಕೋಟಿ ರೂಪಾಯಿಯನ್ನು ಕೊಡುತ್ತೇವೆಂದು ಹೇಳಿ ಜನರಿಗೆ ಗೊತ್ತಾಗಲಿ. ಮಾಡುತ್ತೇವೆಂದು ಹೇಳಿದರೆ ಅದು ಆಗುವುದಿಲ್ಲ. ಇಷ್ಟು ಹಣವನ್ನು ಕೊಡುತ್ತೇವೆಂದು ಹೇಳಿಕೊಟ್ಟರೆ ಜನರಿಗೆ ಇದರಿಂದ ಖುಷಿಯಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಲಿಫ್ಟ್ ಇರಿಗೇಷನ್ ವಿಚಾರದಲ್ಲಿ ಎಲ್ಲಾ ಕಡೆ ಜನರು ಒತ್ತಾಯ ಮಾಡುತ್ತಿದ್ದಾರೆ ಒತ್ತಾಯದ ಬೇಡಿಕೆ, ಶಾಸಕರ ಬೇಡಿಕೆ, ಸಾರ್ವಜನಿಕರ ಬೇಡಿಕೆ ಇದೆ. ಅದನ್ನು ಮನಗಂಡು ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಟ್ಟಿದ್ದೇವೆ, ಟೆಕ್ನಿಕಲ್ ಅಪ್ರೂವಲ್ ಕೊಟ್ಟಿದ್ದೇವೆ. ಇದು ಬಹಳ ದೊಡ್ಡ ಮೊತ್ತದ್ದಾಗಿರುವುದರಿಂದ ಮತ್ತು ಈಗ ಸರ್ಕಾರಕ್ಕೆ ಹಣಕಾಸಿನ ತೊಂದರೆಯಿರುವುದರಿಂದ ಇದನ್ನು ಮಾಡಲಿಕ್ಕೆ ಸಾಧ್ಯವೇ ಎಂದು ಆಲೋಚನೆ ಮಾಡುತ್ತಿದ್ದೇವೆ. A provision of Rs 19 25 crores has been made this year. ಈ ವರ್ಷ ಮುಳವಾಡ ಲಿಫ್ಟ್ ಇರಿಗೇಷನ್‌ಗೆಂದು ೧೯.೨೫ ಲಕ್ಷ ರೂಪಾಯಿಗಳ ಪ್ರಾವಿಜನ್ ಮಾಡಿದ್ದೇವೆ. ಸಾಧ್ಯವಾದರೆ ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್‌ನಿಂದ ಹಣ ಪಡೆದು ಮಾಡತಕ್ಕಂತಹ ಯೋಚನೆ ಇದೆ. ದೊಡ್ಡ ಮೊತ್ತದ ಹಣವನ್ನು ಇದಕ್ಕೆ ಖರ್ಚು ಮಾಡಲಾಗಿದೆ. ಇದನ್ನು ಮಾಡಲೇ ಬೇಕೆನ್ನುವ ಇಚ್ಛೆ ಕೂಡ ಸರಕಾರಕ್ಕಿದೆ. ಆದಷ್ಟು ಬೇಗ ಹಣಕಾಸಿನ ವ್ಯವಸ್ಥೆ ಮಾಡಿ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಎಂ.ಎಲ್. ಉಸ್ತಾದ್.—ಈ ಸಲ ಮುಳವಾಡ್ ಲಿಫ್ಟ್ ಇರಿಗೇಷನ್‌ಗೆ ೧೯.೨೫ ಲಕ್ಷ ಇಟ್ಟಿದ್ದೇವೆಂದು ಹೇಳಿದರು. What is the total estimate of this project and when it will be completed?

ಶ್ರೀ ಎಸ್ ಆರ್. ಬೊಮ್ಮಾಯಿ.—ನಾನು ಉತ್ತರದಲ್ಲೇ ಹೇಳಿದ್ದೇನೆ. ಮುಳವಾಡ ಏತ ನೀರಾವರಿ ಯೋಜನೆಯ ಹೆಡ್‌ವರ್ಕ್ಸ್‌ಗಳನ್ನೊಳಗೊಂಡ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ್ದು ೧೦೭೧.೧೦ ಕೋಟಿ ರೂಪಾಯಿಗಳಷ್ಟರಿಷ್ಕೃತ ಅಂದಾಜಿಗೆ, ಮುಖ್ಯ ಇಂಜಿನಿಯರ್ ಕೃಷ್ಣಾ ಮೇಲ್ದಂಡೆ ಯೋಜನೆ ಆಲಮಟ್ಟಿ ಇವರು ೫ನವರಿ ೮೬ ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿದ್ದಾರೆ.

ಶ್ರೀ ಎಂ.ಎಲ್. ಉಸ್ತಾದ್.—ನಾನು ಕೇಳಿದ್ದಕ್ಕೆ ಉತ್ತರ ಕೊಡಲಿಲ್ಲ.

ಶ್ರೀ ಎಸ್ ಆರ್. ಬೊಮ್ಮಾಯಿ.—ಇದು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಫಸ್ಟ್ ಸ್ಟೇಜ್. ಈ ಮುಳವಾಡ ಲಿಫ್ಟ್ ಇರಿಗೇಷನ್‌ದು ೧೯.೨೫ ಲಕ್ಷ ಇದೂ ಕೂಡ ಫಸ್ಟ್ ಸ್ಟೇಜ್‌ದ್ದು.

ಅಧ್ಯಕ್ಷರು.—ವಿವರಣೆ ಸಾಕು. ಈಗ ಉದಾಸಿಯವರೇ, ತಾವು ಪ್ರಶ್ನೆ ಕೇಳಿ.

ಶ್ರೀ ಸಿ.ಎಂ. ರೇವಣಸಿದ್ದಯ್ಯ.—ನನ್ನ ಪ್ರಶ್ನೆ ಇದೆ.

ಅಧ್ಯಕ್ಷರು.—ನನ್ನ ಹತ್ತಿರ ಇರುವುದರಲ್ಲಿ ಸಿ. ಎಂ. ಉದಾಸಿ ಎಂದು ಇದೆ. ನಾನು ಅವರನ್ನು ಕರೆದಿದ್ದೇನೆ ಅವರು ಪ್ರಶ್ನೆ ಕೇಳಲು ಎದ್ದಿಲ್ಲ. ಮಾನ್ಯ ಚಿಕ್ಕಬೋರಯ್ಯನವರೇ ತಾವು ಕೇಳಿ.

ಶ್ರೀ ಎಂ.ಎಸ್. ಪಾಟೀಲ್.—ನಮಗೆ ಕೊಟ್ಟಿರುವುದರಲ್ಲಿ ರೇವಣಸಿದ್ದಯ್ಯ ಎಂದು ಇದೆ.

ಅಧ್ಯಕ್ಷರು.—ಆಯಿತು ತಾವು ಪ್ರಶ್ನೆ ಕೇಳಿ.